Sri K. PUTTASWAMY.—After the tender was rejected in 1955, when was fresh tender called for ?

Sri T. CHANNIAH.—I have not got the exact date.

Sri K. PUTTASWAMY.—May I know whether any tender was called for at all ?

Sri T. CHANNIAH.—Yes ; we have asked the Medical Officer to call for fresh tenders.

Sri K. PUTTASWAMY.—After December 1955, was any fresh tender called for for supply of linen ?

Sri T. CHANNIAH.—With regard to stitching of clothing fresh tenders have been called for.

ಶ್ರೀ ಕೆ. ಪುಟ್ಟಸ್ವಾಮಿ.—ಬಟ್ಟೆ ಹೊಲಿಯಲು ಬಹಳ ಕಡಮೆ ದರ ನೂಚಿನಲ್ಲಟ್ಟಿದೆಯೆಂದು ಹೇಳುತ್ತೀರಿ. ಆ ಕಡಮೆ ದರವೆಷ್ಟು ?

ಶ್ರೀ ಟಿ. ಚನ್ನಯ್ಯ.—ಬಹಳ ಕಡಮೆಯೆಂದು ತಿಳಿದು ಬಂದಿದೆ, ಖಚಿತವಾದ ದರವೆಷ್ಟೆಂಬುದು ಗೊತ್ತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—1956 ರಲ್ಲಿ ಒಂದುವರ್ಷ ಕಾಲ ಈ ಸಾಮಾನುಗಳ್ಯಾವುವೂ ಅಲ್ಲಿರುವ ರೋಗಿಗಳಿಗೆ ಸರಬರಾಜಾಗದೆ ರೋಗಿಗಳಿಗೆ ತೊಂದರೆಯಾಗಿದೆಯೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನು ಒಪ್ಪುತ್ತೇನೆ. ಅದನ್ನು ಜಾಗ್ರತೆಯಾಗಿ ಸರಿಪಡಿಸಬೇಕು, ಬಟ್ಟೆ ಕೊಂಡುಕೊಳ್ಳಬೇಕು ಎಂದು ಮೆಡಿಕಲ್ ಆಫೀಸರಿಗೆ ತಿಳಿಸಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಆಯುರ್ವೇದ ಆಸ್ಪತ್ರೆಯಲ್ಲಿ ಔಷಧಿ, ಲೇಹಕಟ್ಟಲು ಬಟರ್ ಪೇಪರ್ ಇಲ್ಲದೆ ನ್ಯೂಸ್ ಪೇಪರಿನಲ್ಲಿ ಕಟ್ಟಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿದೆ. ಆ ರೀತಿ ಮಾಡ ಕೂಡದೆಂದು ಸೂಚನೆ ಕೊಡಲಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಬಟರ್ ಪೇಪರ್ ಕೊಂಡುಕೊಳ್ಳಕೂಡದೆಂದು ಹೇಳಿದೆಯೆ ?

ಶ್ರೀ ಟಿ. ಚನ್ನಯ್ಯ.—ನ್ಯೂಸ್ ಪೇಪರ್ ಉಪಯೋಗಿಸಕೂಡದೆಂದು ತಿಳಿಸಿದೆ.

ಶ್ರೀ ಕೆ. ವಿ. ಬೈರೇಗೌಡ.—ಆಸ್ಪತ್ರೆರೋಗಿಗಳು ಅವರ ಸ್ವಂತ ಬಟ್ಟೆ ಉಪಯೋಗಿಸುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಸಾಮಾನ್ಯವಾಗಿ ಆಸ್ಪತ್ರೆ ಬಟ್ಟೆ ಉಪಯೋಗಿಸಲು ಇಷ್ಟವಿಲ್ಲದಿರುವ ಕೆಲವರು ತಮ್ಮ ಸ್ವಂತ ಬಟ್ಟೆಯನ್ನೇ ತರುತ್ತಾರೆ.

ಶ್ರೀ ಕೆ. ವಿ. ಬೈರೇಗೌಡ.—ಆ ರೀತಿ ಕೆಲವರು ಬಟ್ಟೆ ತಂದುಕೊಳ್ಳುವುದರಿಂದ ತಿಗಣೆ ಹೆಚ್ಚಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ. ಆ ತರಹ ಇದ್ದರೆ ಸರಿಪಡಿಸುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ತಾವು ಆಸ್ಪತ್ರೆಗೆ ಭೇಟಿ ಮಾಡಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇನೆ.

ಶ್ರೀ ಕೆ. ವಿ. ಬೈರೇಗೌಡ.—ಆ ಸಂದರ್ಭದಲ್ಲಿ ನಾನು ಹೇಳಿದ ಕುಂದುಕೊರತೆಗಳು ತಮ್ಮ ಗಮನಕ್ಕೆ ಬರಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ತಿಗಣೆ ಇರುವುದು ಮುಂತಾದ್ದನ್ನು ನಮಗೆ ಹೇಳುವುದಿಲ್ಲ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಮೆಡಿಕಲ್ ಆಫೀಸರು ಟೆಂಡರ್ ಕರೆಯದೆ ತಮ್ಮ ಸ್ವಂತ ಇಚ್ಛೆಯ ಪ್ರಕಾರ ಔಷಧಿ ಮತ್ತು ಇತರ ವಸ್ತುಗಳನ್ನು ತೆಗೆದು ಕೊಳ್ಳಲು ಅನುಮತಿ ನೀಡಬೇಕೆಂದು ಸರ್ಕಾರಕ್ಕೆ ಬರೆದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಅವರು ಸ್ವಂತವಾಗಿ ಕೊಳ್ಳುವುದಕ್ಕೆ ಅವಕಾಶವಿಲ್ಲ. ಟೆಂಡರ್ ಕರೆದು ಕೊಂಡುಕೊಳ್ಳಬೇಕು ಎಂದು ಸರ್ಕಾರದವರು ತಿಳಿಸಿದ್ದಾರೆ. ಅದರ ಪ್ರಕಾರ ಮಾಡಬೇಕು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅದಕ್ಕೇ ಅಲ್ಲವೇ ಅವರು ಪ್ರೊಪಗ್ಯಾಂಡ ಮಾಡುತ್ತಿರುವುದು !

ಅಧ್ಯಕ್ಷರು.—ಆ ವಿಚಾರ ಇಲ್ಲಿ ಬಂದಿಲ್ಲ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರ ಸ್ವಂತ ಇಚ್ಛೆಯ ಪ್ರಕಾರ ನಡೆಯಲು ಅವಕಾಶವಿರಬೇಕೆಂದು ಹೇಳಿ ಬ್ಯಾಂಕೆಟ್ 16 ರೂಪಾಯಿ ಬಾಳುವುದನ್ನು 32 ರೂಪಾಯಿಗೆ ತೆಗೆದುಕೊಂಡಿರುವುದನ್ನು ಅಂಟಿಕರಪ್ಷನ್ ಇಲಾಖೆಯ ಡೈರೆಕ್ಟರು ಸರ್ಕಾರಕ್ಕೆ ತಿಳಿಸಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಲಂಚ ನಿರೋಧ ಇಲಾಖೆಯವರು ಬರೆದಿರುವುದು ತಮ್ಮ ಫೈಲಿನಲ್ಲಿದೆ. ನೋಡಿ.

Mr. SPEAKER.—I do not allow that question ; the Hon'ble Member can ask whether it was not brought to the notice of Government.

Suvarnamukhi Project, Kanakapura (Submersion of lands)

Q.—657. Sri S. KARIAPPA (Kanakapura):—

Will the Government be pleased to state :—

(*a*) the names of persons whose lands have been submerged in the Suvarnamukhi Project, Kanakapura Taluk ;

(*b*) the extent of submersion in each case ;

(*c*) whether they are aware that the lands of some of these ryots were occupied by the Department nearly five years ago ;

(*d*) whether they have been given any compensation or alternative lands to the ryots concerned ;

(*e*) if so, when ?—

A.—Sri A. G. RAMACHANDRA RAO (Minister for Law and Education).—

(*a*) and (*b*)

Name	*Extent* Ac.	Gs.
1. Sri Setty, son of Kada	0	11
2. Sri Chandra Setty	0	15
3. Sri Kenche Gowda Khatedar, Sri Munisetty Anubhavadar	1	25
4. Sri Guruviah	2	38
5. Sri Varadachar	2	39

(*c*) The lands were not occupied five years ago.

(*d*) and (*e*) Awards have been passed in all cases and compensation will be paid shortly.

ಶ್ರೀ ಎಸ್. ಕರಿಯಪ್ಪ.—ಕೇವಲ 5 ಜನರ ಜಮೀನು ಮಾತ್ರ ಮುಳುಗಡೆಯಾಗಿದೆಯೆಂಬ ಸಮಾಚಾರ ಎಲ್ಲಿಂದ ಬಂತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲಾಖೆಯಿಂದ.

ಶ್ರೀ ಎಸ್. ಕರಿಯಪ್ಪ.—ಬಂದು ಎಷ್ಟು ದಿವಸವಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಚೆಗೆ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಈಚೆಗೆ 50 ಜನರ ಜಮೀನು ಮುಳುಗಡೆಯಾಗಿದೆಯೆಂದು ರೆವೆನ್ಯೂ ಇಲಾಖೆ ರಿಕಾರ್ಡು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—50 ಜನರ ಪೈಕಿ 5 ಜನರ ವಿಚಾರದಲ್ಲಿ ಮಾತ್ರ ತೀರ್ಪನ್ನು ಕೊಡಲಾಗಿದೆ. ಆದ್ದರಿಂದ ಮುಳುಗಡೆಯಾಗಿರುವ ಜಮೀನುಳ್ಳವರೆಲ್ಲರಿಗೂ ಪರಿಹಾರ ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಷ್ಟು ಸಮಾಚಾರ ಮಾತ್ರ ಬಂದಿದೆ. An area of 35 acres dry on the left bank channel and 20 acres on right bank channel have been acquired. An extent of 12 acres garden gets submerged.

ಶ್ರೀ ಎಸ್. ಕರಿಯಪ್ಪ.—ಅದು ಕೇವಲ ನಾಲಾ ಪ್ರದೇಶದಲ್ಲಿ ಮುಳುಗಡೆಯಾಗಿರುವುದು. ಬಾಕಿ ತೋಟ ಮುಳುಗಡೆಯಾಗಿರುವುದು ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಫಾನಲ್ ನಿಂದ ಮುಳುಗಡೆಯಾಗಿರುವುದು ಲೆಕ್ಕಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಎರಡು ಮೈಲಿ ದೂರ ಹೊಳೆಯ ನೀರು ನಿಂತು ಅನೇಕ ತೋಟಗಳು ಮುಳುಗಡೆಯಾಗಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇನೆ.

ಶ್ರೀ ಎಸ್. ಕರಿಯಪ್ಪ.—ವಿಚಾರಿಸಿ ಪರಿಹಾರವನ್ನು ಅವರಿಗೆ ಬೇಗ ಕೊಡಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

Sakuni Thimmanahalli Channel Work

Q.—809. Sri MUDDURAMIAH (Koratagere).—

Will the Government be pleased to state :—

(*a*) when the channel work of Sakuni Thimmanahalli, Holavanahalli hobli in Koratagere Taluk was sanctioned ;

(*b*) if so, the action taken so far ?

A.—Sri A. G. RAMACHANDRA RAO (Minister for Law and Education).—

(*a*) In July 1946.

(*b*) Work to the extent of Rs. 300 has been carried out for improving the existing channel only.

ಶ್ರೀ ಮುದ್ದುರಾಮಯ್ಯ.—ಅಂದಾಜು ಎಷ್ಟಕ್ಕೆ ತಯಾರಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು 1946 ನೆಯ ಇಸವಿಯಿಂದ ನಿಂತುಬಂದಿದೆ. 1950 ಮತ್ತು 1951 ನೆಯ ಇಸವಿಗಳಲ್ಲಿ ಪ್ರಯತ್ನಮಾಡಿ 10 ಸಾವಿರ ರೂಪಾಯಿಗಳಿಂದ 11 ಸಾವಿರ ರೂಪಾಯಿಗಳವರೆಗೆ ರಿಪೈಜ್ ಆಗಿ ಟೆಂಡರ್‌ಬಾರದೆ ನಿಂತುಹೋಗಿದೆ. ಹತ್ತು ವರ್ಷಗಳಿಂದ ಪ್ರಯತ್ನವಿರುವುದರಿಂದ ಇದನ್ನು ತೀವ್ರ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

Sugar Company Farm, Mandya (Application of Plantation Labour Act).

Q.—679. Sri D. VENKATESH (Gandhinagar).—

Will the Government be pleased to state :—

(*a*) whether the Mandya Sugar Company Labour Association applied to them to extend the provisions of Plantation Labour Act to the farm managed by the Sugar Company ;

(*b*) whether it is a fact that they made the application so far back as 20th October 1955 ;